



# ಕ್ಯಾನ್ಸರ್‌ನೊಂದಿಗೆ ಸೆಣಸಿದೆ, ಗೆದ್ದುಬಂದೆ...

**‘ಕೋಲನ್ ಕ್ಯಾನ್ಸರ್’ಗೆ ತುತ್ತಾಗಿ, ಮೂರನೇ ಹಂತ ತಲುಪಿದ ಬಳಿಕವೂ ಸೂಕ್ತ ಚಿಕಿತ್ಸೆಯ ಮೂಲಕ ಸಂಪೂರ್ಣ ಗುಣಮುಖರಾದ ಹಿರಿಯ ನಾಗರಿಕರೊಬ್ಬರ ಯಶೋಗಾಥೆ ಇಲ್ಲಿದೆ. ಕ್ಯಾನ್ಸರ್ ಅನ್ನು ಗೆಲ್ಲಬಹುದು ಎಂಬ ಈ ಅನುಭವ ಕಥನ ಕ್ಯಾನ್ಸರ್ ರೋಗಿಗಳಲ್ಲಿ ಆತ್ಮವಿಶ್ವಾಸ ತುಂಬಬಲ್ಲದು.**

■ **ಗಾಯತ್ರಿ ಮೂರ್ತಿ**

ಕ್ಯಾನ್ಸರ್ ರೋಗ ಮನುಷ್ಯನ ದೇಹವನ್ನು ಒಮ್ಮೆ ಆಕ್ರಮಿಸಿದರೆ, ಅದು ಆಕ್ಟೋಪಸ್‌ನಂತಹ ತನ್ನ ಕಬಂಧ ಬಾಹುಗಳನ್ನು ದೇಹದ ಎಲ್ಲೆಡೆ ಹರಡಿ ರೋಗಿಯನ್ನು ಬಲಿತೆಗೆದುಕೊಳ್ಳುವ ಸಾಧ್ಯತೆ ಬಹಳಷ್ಟಿರುತ್ತದೆ. ಆದರೆ ಕ್ಯಾನ್ಸರ್ ರೋಗವನ್ನು ಗುಣಪಡಿಸಬಹುದು, ರೋಗವನ್ನು ಉಲ್ಬಣಿಸಲು ಬಿಡದೆ ಮೊದಲ ಹಂತಗಳಲ್ಲೇ ವೈದ್ಯರನ್ನು ಸಂಪರ್ಕಿಸಿದರೆ ಸುದೀರ್ಘಕಾಲದ ಚಿಕಿತ್ಸೆಯಿಂದ ಗುಣಮುಖರಾಗಲು ಸಾಧ್ಯ ಎಂಬುದಕ್ಕೆ ನಾನೇ ಸಾಕ್ಷಿ.

ನಾನು ಪ್ರತಿಷ್ಠಿತ ಕಾಲೇಜೊಂದರಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕಿಯಾಗಿ ನಿವೃತ್ತಿ ಹೊಂದಿದ ನಂತರ ಪತಿ, ಮಗ, ಸೊಸೆ ಹಾಗೂ ಮೊಮ್ಮಕ್ಕಳೊಂದಿಗೆ ನಿವೃತ್ತ ಜೀವನ ನಡೆಸುತ್ತ, ನನ್ನ ಪ್ರೀತಿಯ ಹವ್ಯಾಸವಾದ ಬರವಣಿಗೆಯಲ್ಲಿ ನಿರತಳಾಗಿ ನೆಮ್ಮದಿಯ ಜೀವನ ನಡೆಸುತ್ತಿದ್ದೆ. ಆದರೆ ವಿಧಿ ನನ್ನನ ಜೀವನದ ದಿಕ್ಕನ್ನು ಬದಲಿಸಿ ನನ್ನನ್ನು ಕಠಿಣ ಪರೀಕ್ಷೆಗೆ ಒಡ್ಡಿತು.

2016ರ ಜುಲೈ, ಆಗಸ್ಟ್ ತಿಂಗಳು. ನನಗೆ ತೀವ್ರವಾದ ಮಲಬದ್ಧತೆ ಆರಂಭವಾಯಿತು. ಮನೆಮದ್ದು ಮಾಡಿದೆ, ಫಲ ನೀಡಲಿಲ್ಲ. ಬದಲಿಗೆ ರಕ್ತಮಿಶ್ರಿತ ಮ್ಯೂಕಸ್‌ನಂತಹ ಮಲ ವಿಸರ್ಜನೆ ಆರಂಭವಾಯಿತು. ನನ್ನ ದಡ್ಡ ಮನಸ್ಸಿಗೆ ಇದರ ಗಂಭೀರ ಕಾರಣ ಹೊಳೆಯಲಿಲ್ಲ. ನನಗೆ ಬಹಳ ವರ್ಷಗಳಿಂದ ಇರುವ ಮೂಲವ್ಯಾಧಿಯಿಂದ ಹೀಗಾಗುತ್ತಿದೆ ಎಂದು ಭಾವಿಸಿ ಸುಮ್ಮನಾದೆ. ಆದರೆ ಇದು ಸತತವಾಗಿ ತಿಂಗಳೆರಡಾದರೂ ನಿಲ್ಲದಿದ್ದಾಗ ಮನೆಯಲ್ಲಿ ವಿಷಯ ತಿಳಿಸಿದೆ. ನಂತರ ನಮ್ಮ ಕುಟುಂಬ ವೈದ್ಯರಾದ ಡಾ. ಅರವಿಂದ್‌ರ ಸಲಹೆಯ ಮೇರೆಗೆ ‘ಕೊಲನೋಸ್ಕೋಪಿ’ ಎಂಬ ತಪಾಸಣಾ ಕ್ರಮಕ್ಕೆ ಒಳಗಾದೆ. ಅದರ ವರದಿ ಓದಿ ಡಾ. ಅರವಿಂದ್ ವಿಷಯವನ್ನು ನೇರವಾಗಿಯೇ ತಿಳಿಸಿ, ‘ನಿಮಗೆ ದೊಡ್ಡ ಕರುಳಿನ ಕ್ಯಾನ್ಸರ್ ಆಗಿದೆ. ಚಿಂತಿಸಬೇಡಿ, ಇದು ಶಸ್ತ್ರಚಿಕಿತ್ಸೆಯಿಂದ ವಾಸಿಯಾಗುತ್ತದೆ’ ಎಂದರು.

ವೈದ್ಯರು PET ((Positron Emission Tomography) ಸ್ಕ್ಯಾನ್ ಮಾಡಿಸುವಂತೆ ಸಲಹೆ ನೀಡಿದರು. ಆ ಪರೀಕ್ಷೆಯಲ್ಲಿ, ಕ್ಯಾನ್ಸರ್ 3ನೇ ಹಂತದಲ್ಲಿದೆ ಎಂದೂ ದೇಹದ ಮತ್ತೆಲ್ಲೂ ಕ್ಯಾನ್ಸರ್ ಕೋಶಗಳು ಇಲ್ಲವೆಂದೂ ತಿಳಿಯಿತು. ಸಾಮಾನ್ಯವಾಗಿ ಯಾರಿಗೂ ತಮಗೆ ಕ್ಯಾನ್ಸರ್ ಬರಬಹುದೆಂಬ ದೂರದ ಕಲ್ಪನೆಯೂ ಇರುವುದಿಲ್ಲ ಅಥವಾ ಮನಸ್ಸು ಆ ಬಗ್ಗೆ ಯೋಚಿಸಲು ಕೂಡ ಇಷ್ಟಪಡುವುದಿಲ್ಲ. ಇಂತಹ ಭಾವನೆಗೆ ನಾನೂ ಹೊರತಾಗಿರಲಿಲ್ಲ. ಹೀಗಾಗಿ ಕ್ಯಾನ್ಸರ್ ಯಾರಿಗಾದರೂ ಯಾವ ವಯಸ್ಸಿನಲ್ಲಾದರೂ ಬರಬಹುದೆಂಬ ನಗ್ನಸತ್ಯವನ್ನು ಎದುರಿಸುವುದು ಸುಲಭದ ಮಾತಾಗಿರಲಿಲ್ಲ. ಆರಂಭದಲ್ಲಿ ನೋವುಂಟುಮಾಡದೆ ಒಳಗೊಳಗೇ ನನ್ನ ದೊಡ್ಡಕರುಳನ್ನು ಕ್ಯಾನ್ಸರ್ ಆಕ್ರಮಿಸಿತ್ತು.

‘ನಿಮಗೆ ಕೋಲನ್ ಕ್ಯಾನ್ಸರ್ ಆಗಿದೆ’ ಎಂದು ವೈದ್ಯರು ಹೇಳಿದ ಕೂಡಲೇ ಸ್ವಲ್ಪ ಹೊತ್ತು ಅಧೀರಳಾದೆ. ಶಸ್ತ್ರಚಿಕಿತ್ಸೆಯಿಂದ ಗುಣಮುಖರಾಗುತ್ತೀರಿ ಎಂದು ವೈದ್ಯರು ಹೇಳಿದ